**ಕರ್ನಾಟಕ ಸರ್ಕಾರ**
**(ತಾಂತ್ರಿಕ ಶಿಕ್ಷಣ ಇಲಾಖೆ)**

ಸಂಖ್ಯೆ: ಸಿಟಿಇ 06 ಡಿವಿಪಿ (1) 2025

**ಆಯುಕ್ತರ ಕಛೇರಿ**
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ
ಅರಮನೆ ರಸ್ತೆ, ಬೆಂಗಳೂರು- 560 001.
ದಿನಾಂಕ: 17.07.2025.

**"ಅಧಿಕೃತ ಜ್ಞಾಪನ"**

**ವಿಷಯ:** 2025-26 ನೇ ಸಾಲಿನಲ್ಲಿ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಹೆಚ್ಚುವರಿ ಭೋಧನಾ ಕಾರ್ಯಭಾರವನ್ನು ನಿರ್ವಹಿಸಿದ ಅತಿಥಿ ಉಪನ್ಯಾಸಕರಿಗೆ ಗೌರವಧನ ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಇಡಿ 61 ಹೆಚ್‌ಪಿಟಿ 2025, ದಿ: 09.04.2025.
2. ಸರ್ಕಾರದ ಪತ್ರ ಸಂಖ್ಯೆ:ಇಡಿ 87 ಡಿಟಿಇ 2025 ದಿನಾಂಕ:14.07.2025

*********

ಮೇಲೆ ನಮೂದಿಸಿದ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸರ್ಕಾರದ ಆದೇಶದಗಳಲ್ಲಿ 2025-26 ನೇ ಆರ್ಥಿಕ ಸಾಲಿಗೆ ಶಿಕ್ಷಣ ಇಲಾಖೆಯ ಉನ್ನತ ಶಿಕ್ಷಣ ವಲಯದಡಿ ಬರುವ ತಾಂತ್ರಿಕ ಶಿಕ್ಷಣಕ್ಕೆ (ರಾಜ್ಯ ವಲಯ ಯೋಜನೆಗಳು) ಸಂಬಂಧಿಸಿದಂತೆ ಆಯವ್ಯಯದಲ್ಲಿನ ಯೋಜನಾ ಕಾರ್ಯಕ್ರಮಗಳಡಿ ಮುಂದುವರಿದ ಕಾರ್ಯಕ್ರಮಗಳನ್ನು ಮುಂದುವರಿಸಲು ಮತ್ತು ಅನುಷ್ಠಾನಗೊಳಿಸಲು ಅನುಮತಿ ನೀಡಿ ಮೊದಲನೇ ಕಂತಿನ ಅನುದಾನವನ್ನು ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಉನ್ನತ ಶಿಕ್ಷಣ ಇಲಾಖೆಯಡಿ ಕಾರ್ಯ ನಿರ್ವಹಿಸುತ್ತಿರುವ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆ ಮತ್ತು ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿನ ಕಾರ್ಯಭಾರಕ್ಕೆ ಅನುಗುಣವಾಗಿ ಅತಿಥಿ ಉಪನ್ಯಾಸಕರ ಸೇವೆಯನ್ನು ಪಡೆಯಲು ಅನುಮೋದನೆ ನೀಡಲಾಗಿದೆ.

2025-26 ನೇ ಆರ್ಥಿಕ ಸಾಲಿನಲ್ಲಿ ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳಲ್ಲಿ ಹೆಚ್ಚುವರಿ ಭೋಧನಾ ಕಾರ್ಯಭಾರವನ್ನು ನಿರ್ವಹಿಸಲು ನೇಮಕ ಮಾಡಿಕೊಂಡಿರುವ ಅತಿಥಿ ಉಪನ್ಯಾಸಕರುಗಳಿಗೆ ಗೌರವ ಧನ ಪಾವತಿಸಲು 2025-26 ನೇ ಆರ್ಥಿಕ ಸಾಲಿನ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ 2203-00-105-0-01-324 **ರೂ: 70,00,000**/- ಗಳನ್ನು ಈ ಕೆಳಗಿನ ಕೋಷ್ಟಕದಲ್ಲಿರುವಂತೆ ಅನುದಾನವನ್ನು ಬಿಡುಗಡೆ ಮಾಡಿ ಆದೇಶಿಸಲಾಗಿದೆ.

(ರೂ. ಗಳಲ್ಲಿ)

| **ಕ್ರಮ ಸಂಖ್ಯೆ** | **ಸಂಸ್ಥೆ** | **ಡಿಡಿಓ** | **324** |
|---|---|---|---|
| 1 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಭದ್ರಾವತಿ | 33240O | 10,00,000 |

| | | | |
|---|---|---|---|
| 2 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಮಂಗಳೂರು | 332570 | 12,00,000 |
| 3 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಾಗಲಕೋಟೆ | 332770 | 15,00,000 |
| 4 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಹುಬ್ಬಳ್ಳಿ | 332970 | 15,00,000 |
| 5 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ,ಕಲಬುರ್ಗಿ | 333010 | 10,00,000 |
| 6 | ಸರ್ಕಾರಿ ಕಿರಿಯ ತಾಂತ್ರಿಕ ಶಾಲೆ, ಬಳ್ಳಾರಿ | 333050 | 8,00,000 |
| | | **ಒಟ್ಟು** | **70,00,000** |

ಪ್ರಸ್ತುತ ಸರ್ಕಾರಿ ಕರಿಯ ತಾಂತ್ರಿಕ ಶಾಲೆಗಳಿಗೆ ಬಿಡುಗಡೆ ಮಾಡಿರುವ ಅನುದಾವನ್ನು ಯಾವ ಉದ್ದೇಶಕ್ಕೆ ಬಿಡುಗಡೆ ಮಾಡಲಾಗಿದಿಯೋ ಅದೇ ಉದ್ದೇಶಕ್ಕೆ ಬಳಸಿ ವೆಚ್ಚ ಮಾಡಿ ಬಳಕೆ ಪ್ರಮಾಣ ಪತ್ರ (Utilization Certificate) ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

Digitally signed by
MANJUSHREE N
Date: 18-07-2025
17:51:09

**ಆಯುಕ್ತರು**

**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ.**

**ಇವರಿಗೆ:**

1. ಸಂಬಂಧಪಟ್ಟ ಪ್ರಾಂಶುಪಾಲರುಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

**ಪ್ರತಿ:**

1. ನಿರ್ದೇಶಕರು ತಾಂತ್ರಿಕ ಶಿಕ್ಷಣ ಆಯುಕ್ತಾಲಯ, ಬೆಂಗಳೂರು- ಇವರ ಮಾಹಿತಿಗಾಗಿ
2. ಜಂಟಿ ನಿರ್ದೇಶಕರು (ಆಡಳಿತ), ತಾಂತ್ರಿಕ ಶಿಕ್ಷಣ ಆಯುಕ್ತಾಲಯ, ಬೆಂಗಳೂರು- ಇವರ ಮಾಹಿತಿಗಾಗಿ
3. ಆಡಳಿತಾಧಿಕಾರಿಗಳು, ತಾಂತ್ರಿಕ ಶಿಕ್ಷಣ ಆಯುಕ್ತಾಲಯ, ಬೆಂಗಳೂರು- ಇವರ ಮಾಹಿತಿಗಾಗಿ
4. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು ಖಜಾನಾಧಿಕಾರಿಯವರು, ರಾಜ್ಯ ಹುಜೂರ್ ಖಜಾನೆ
5. ಖಜಾನಾಧಿಕಾರಿಯವರು, ರಾಜ್ಯ ಹುಜೂರ್ ಖಜಾನೆ
6. ಲೆಕ್ಕಾಧಿಕಾರಿಗಳು (ಬಿಲ್ಸ್)
7. ನಗದು ವಿಭಾಗದ ಅಧೀಕ್ಷಕರು / ಕಾರ್ಯನಿರ್ವಾಹಕರು
8. ಆಕ್ಸಿವೇಷನ್ ಕಡತಕ್ಕ